OS. No.154/2023
DW-1

ದಿನಾಂಕಃ 06-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ: - 1, 4 ರಿಂದ 6 ನೇ ಪ್ರತಿವಾದಿ ಪರ**

**ಶ್ರೀ.ಡಿ.ಟಿ.ಬಿ ವಕೀಲರಿಂದ ಃ**

1. ದಿಃ 01-02-1995 ರ ವಿಶೇಷ ಭೂಸ್ವಾಧೀನಾಧಿಕಾರಿಗಳ ಐ ತೀರ್ಪಿನ ಧೃಡಿಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-66 ಎಂದು ಗುರುತಿಸಲಾಯಿತು.

2. ನನ್ನ ತಂದೆ ಭೂಸ್ವಾಧೀನ ಮೊತ್ತ ಪಡೆದಿರುವ ರಜಿಸ್ಟರನ ಧೃಡಿಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-67 ಎಂದು ಗುರುತಿಸಲಾಯಿತು.

3. ನಾನು ಭೂಸ್ವಾಧೀನ ಮೊತ್ತ ಪಡೆದಿರುವ ರಜಿಸ್ಟರನ ಧೃಡಿಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-68 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ- ವಾದಿ ಪರ ಶ್ರೀ.ಐ.ಡಿ.ಎಸ್. ವಕೀಲರಿಂದ ಃ**

1. ನನ್ನ ಸಹೋದರಿ ಭೀಮವ್ವನನ್ನು ತಾಶಾಳ ಗ್ರಾಮ ವಿಜಯಪೂರ ಜಿಲ್ಲೆಯಲ್ಲಿ ಸಂಗಪ್ಪ ಸೋಲ್ಲಾಪೂರರವರಿಗೆ ಮದುವೆ ಮಾಡಿ ಕೊಟ್ಟಿದ್ದೇವೆ ಎಂದರೆ ಸರಿ. ನನ್ನ ಸಹೋದರಿಗೆ ಮಕ್ಕಳು ಆಗಿಲ್ಲ ಎಂದರೆ ಸರಿ. ಭೀಮವ್ವ ಮೃತಪಟ್ಟ ನಂತರ ಸಂಗಪ್ಪ ಇನ್ನೊಂದು ಮದುವೆಯಾದರು ಎಂದರೆ ಸರಿ. ನಮ್ಮ ಅಜ್ಜನಿಗೆ ಒಟ್ಟು 4 ಜನ ಮಕ್ಕಳು ಅವರೆಂದರೆ, ರಾಮಪ್ಪ, ಮಲ್ಲಪ್ಪ ಮತ್ತು ಭೀಮಪ್ಪ ಹಾಗೂ ಬಸಪ್ಪರವರು. ಸದರಿ ಬಸಪ್ಪರವರು ಗುರುಪಾದಪ್ಪ ಹೋಳೆಪ್ಪರವರಿಗೆ ದತ್ತಕ್ಕ ಆಗಿರುತ್ತಾರೆ. ರಾಮಪ್ಪ ನನ್ನ ತಂದೆ ಎಂದರೆ ಸರಿ.

2. ನನ್ನ ತಂದೆಗೆ ನಿಡಿ-7 ರ ಪ್ರಕಾರ ಸರ್ವೆ ನಂ.151/1 ರಲ್ಲಿ 4 ಎಕರೆ, ಸರ್ವೆ ನಂ.67/1 ಬಿ+2 ರಲ್ಲಿ 5 ಎಕರೆ 2 ಗುಂಟೆ, ಸರ್ವೆ ನಂ.69/2 ಬಿ+1 ರಲ್ಲಿ 5 ಎಕರೆ 11 ಗುಂಟೆ, ಸರ್ವೆ ನಂ. 70/1+2+3 ರಲ್ಲಿ 7 ಎಕರೆ, ಮತ್ತು ಸರ್ವೆ ನಂ.127/1+1 ರಲ್ಲಿ 4 ಎಕರೆ 24 ಗುಂಟೆ ಬಂದಿತ್ತು ಎಂದರೆ ಸರಿ. ಸದರಿ

ಜಮೀನುಗಳು ನೀರಾವರಿ ಜಮೀನುಗಳು ಎಂದರೆ ಸರಿ. ಸದರಿ ಜಮೀನುಗಳ ಉತ್ಪನ್ನದಿಂದ ನಾನು, ನನ್ನ ತಂದೆ, ಸಹೋದರಿಯರು ಮತ್ತು ತಾಯಿ ಸೇರಿ ನಿಡಿ-6 ರಂತೆ ಸರ್ವೆ ನಂ.127/1/1 ನ್ನು ನನ್ನ ತಂದೆ ಹೆಸರಿಗೆ ಖರೀದಿಸಿದ್ದೇವು ಎಂದರೆ ಸರಿ.

3. ಜಂಬಗಿ ಬಿಕೆ ಗ್ರಾಮದಲ್ಲಿ ನನ್ನ ತಂದೆ ಹೆಸರಿಗೆ ಇರುವ ಮನೆ ಮುಳುಗಡೆಯಾಗಿ ಅದರ ಪರಿಹಾರ ಹಣ ಬಂದಿತ್ತು ಎಂದರೆ ಸರಿ. ಸದರಿ ಮುಳುಗಡೆ ಪರಿಹಾರವಾಗಿ ಜಂಬಗಿ ಕೆ.ಡಿ ರಲ್ಲಿ ಪ್ಲಾಟ ನಂ.23 ಡಿ (ನಾಕೂರು ಪು.ವ.ಕೇಂದ್ರ) ನನ್ನ ತಂದೆ ಹಸರಿಗೆ ಮಂಜೂರುಯಾಯಿತು ಎಂದರೆ ಸರಿ. ನನ್ನ ತಂದೆ ತಾಯಿ ಮೃತ ಪಟ್ಟಿದ್ದಾರೆ ಎಂದರೆ ಸರಿ. ಪ್ಲಾಟ ನಂ.23 ಡಿ (ನಾಕೂರು ಪು.ವ.ಕೇಂದ್ರ) ಇವತ್ತಿಗೂ ನನ್ನ ತಂದೆ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಪ್ಲಾಟನ ವಾರಸಾ ಇವತ್ತಿಗೂ ಏಕೆ ಮಾಡಿಕೊಂಡಿಲ್ಲಾ ಹೇಳಲಾಗುವುದಿಲ್ಲ. ಒಂದುವೇಳೆ ಪ್ಲಾಟಗೆ ವಾರಸಾ ಮಾಡಿಕೊಂಡರೆ ವಾದಿಗಳು ಸಹ ಪಾಲುದಾರರಾಗಿ ಸೇರ್ಪಡೆಯಾಗುತ್ತಾರೆ ಅನ್ನುವ ಕಾರಣದಿಂದ ವಾರಸಾ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ ನಾನೇ ದೊಡ್ಡವನು ಎಂದರೆ ಸರಿ. ಮನೆಯ ವ್ಯವಹಾರ ನಾನೇ ನೋಡಿಕೋಳ್ಳುತ್ತೇನೆ ಎಂದರೆ ಸಾಕ್ಷಿ ನಾನು ಮತ್ತು ನನ್ನ ತಂದೆ ನೋಡಿಕೊಳ್ಳುತ್ತಾರೆ ಎನ್ನುತ್ತಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲವಕಾಶ ಕೋರುತ್ತಾರೆ, ಕಾಲವಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ